ಹಾಗೆ ನೋಡ್ಲಿಯಂತೆ ನೋಡುವಾ' ಅಂದುಕೊಂಡಳು ರಕ್ಷಾ.

ಮುಂದಿನ ಎರಡು ತಾಸುಗಳಲ್ಲಿ ಪೊಲೀಸ್ ಭದ್ರತೆಯಲ್ಲಿ ಕೋರ್ಟಿನಿಂದ ಹೊರ ಬಂದ ನವಜೋಡಿಯನ್ನು ಕೂರಿಸಿಕೊಂಡ ಕಾರು, ಅದರ ಹಿಂದುಮುಂದಿಂದ ಎಸ್ಕಾರ್ಟ್‌ನಂತೆ ಮತ್ತಷ್ಟು ಕಾರುಬೈಕುಗಳು ದೂಳೆಬ್ಬಿಸಿ ಕೋರ್ಟ್ ಆವರಣ ದಾಟಿಯೇಬಿಟ್ಟಿತು.

**ರಕ್ಷಾ ಒಂದೇ ಉಸಿರಲ್ಲಿ, "ಫಕೀರಿಚ್ಚ, ನನ್ನನ್ನೀಗ್ಲೆ ಮನೆಗೆ ಕರ್ಕೊಂಡು ಹೋಗಿ. ನಂಗೆ ಪೊಪ್ಪ ಬೇಕು. ಅಮ್ಮ ಬೇಕು. ಶಾಲೆಗೆ ಹೋಗ್ಬೇಕು." ಅನ್ನುತ್ತ ಅಳಲಾರಂಭಿಸಿದಳು.**

★★★

ಕರೆಗಂಟೆ ಸದ್ದಿಗೆ ಈ ರಾತ್ರಿ ಯಾರಪ್ಪಾ ಅಂದುಕೊಂಡು ಬಾಗಿಲು ತೆರೆದ ಫಕೀರಿಚ್ಚ. ಎದುರಿಗೆ ನಿಂತಿದ್ದ ಮೊಯ್ದಿನ್ಬಾವಾ, ಅವರ ತಮ್ಮ ಹುಸೈನ್ಬಾವಾ ಹಾಗೂ ಆರೀಫ ಅವನ ಹಿಂದೆ ಬುರ್ಕಾ ತೊಟ್ಟ ಇಬ್ಬರು ಹೆಂಗಸರು. ನೋಡಿದರೇ ಅದು ಮೈಮೂನ ಹಾಗೂ ಈಗ ರುಕಿಯಾಬಾನು ಆಗಿದ್ದ ರಕ್ಷಾ ಅನ್ನುವುದು ಗೊತ್ತಾಗುತ್ತಿತ್ತು. ಶಾಸ್ತ್ರ–ಸಂಪ್ರದಾಯಗಳಿಲ್ಲದ ತನ್ನ ಬಗ್ಗೆ ಮೊಯಿದಿನ್ಬಾವನಿಗೆ ಅನಾದರವಿರುವುದು ಫಕೀರಿಚ್ಚನಿಗೆ ಗೊತ್ತಿತ್ತು. ಯಾವತ್ತೂ ಹೀಗೆ ಅವರು ಅವನ ಮನೆಗೆ ಬಂದವರಲ್ಲ. ಏನಾದರೂ ವಿಶೇಷ ದಿನಗಳಿದ್ದರೆ ಮಾತ್ರ ಬಂದಂತೆ ಮಾಡಿ ಹೊರಟುಬಿಡುತ್ತಿದ್ದವರು ಹೀಗೆ ಬಂದಿದ್ದಾರೆಂದರೆ ರಕ್ಷಾಳ ವಿಚಾರವೇ ಏನೋ ಇರಬೇಕೆಂದು ತರ್ಕಿಸಿಬಿಟ್ಟಿತು ಮನಸ್ಸು. ಆಗಾಗ ಆರೀಫನ ಮನೆಗೆ ಹೋಗಿ ಈಗ ರುಕಿಯಾಬಾನು ಆದ ರಕ್ಷಾಳನ್ನು ಮಾತಾಡಿಸಿ ಬರುತ್ತಿದ್ದ ಫಕೀರಿಚ್ಚ ಇತ್ತೀಚೆಗೆ ಒಂದೆರಡು ತಿಂಗಳಿಂದ ಅತ್ತ ಹೋಗಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಅವಳನ್ನು ಕಂಡರೆ ಅವಳ ತಂದೆ ಮನೆಯಲ್ಲಾದ ಘಟನೆಗಳನ್ನ ಹೇಳದಿರಲು ಅವನಿಂದ ಸಾಧ್ಯವಿರಲಿಲ್ಲ. ರಕ್ಷಾಳ ತಮ್ಮ ರಾಜೇಶ ಶಾಲೆಯಿಂದ ಬಂದ ಮೇಲೆ ಟ್ಯೂಷನ್ನಿಗೆಂದು ಹೇಳಿ ಸಂಜೆ ಗುಟ್ಕಾಜಿತು ಹಾಗೂ ಮೂಸಾನೊಂದಿಗೆ ಸೇರಿ ಕದ್ದು ಗುಟ್ಕಾ ಸಾಗಿಸುವ ಕೆಲಸ ಮಾಡಲು ಹೋಗುತ್ತಿದ್ದವನು ಪೊಲೀಸರ ಕೈಗೆ ಸಿಕ್ಕಿ ಬಿದ್ದಾಗ ಫಕೀರಿಚ್ಚ ಸುರೇಶನೊಂದಿಗೆ ಸ್ಟೇಷನ್ನಿಗೆ ಹೋಗಿ ಏನೆಲ್ಲ ಹರ್ಕತ್ತು ಮಾಡಿ ಬಿಡಿಸಿಕೊಂಡು ಬಂದಿದ್ದ. ಮನೆಗೆ ಬರುತ್ತಿದ್ದಂತೆ ಸುರೇಶ ಮನೆಯಂಗಳದಲ್ಲೆ ಮಗನನ್ನು ಬೆಲ್ಟಿನಲ್ಲಿ ಹೊಡೆದಿದ್ದ. ಆತ ಅದರಿಂದ ಚೇತರಿಸಿಕೊಳ್ಳಲು ವಾರ ಹಿಡಿದಿತ್ತು. ರಕ್ಷಾಳ ಅಮ್ಮ ಮಗನನ್ನು ಕರೆದುಕೊಂಡು ತವರಿಗೆ ಹೋಗಿದ್ದಳು. ಕೊನೆಗೆ ಸುರೇಶನೇ ಹೋಗಿ ಕರೆತಂದಿದ್ದ. ಆದರೆ, ರಾಜೇಶ ಶಾಲೆಗೆ ಹೋಗುವುದನ್ನು ಬಿಟ್ಟುಬಿಟ್ಟಿದ್ದ. ಸುರೇಶ ಫಕೀರಿಚ್ಚನ ಬಳಿ, "ಆ ಲೌಡಿಗೆ ನನ್ನ ಮನೆಯ ಯಾವ ಸಂಗತಿಯನ್ನೂ ನೀವು ಹೇಳ್ಬಾರ್ದು. ನನ್ನ ಮನೆಗೆ ಕಿಚ್ಚಿಟ್ಟು ಹೋದವಳು ಅವಳು" ಅಂದಿದ್ದ. ತಾನು ಏನೂ ಹೇಳದೆಯೇ ಸುರೇಶ ಮಗಳನ್ನು ನೆನಪು ಮಾಡಿಕೊಂಡು ಕೆಟ್ಟ ಮಾತಿನಲ್ಲಿ ನಿಂದಿಸಿದಾಗ, ನೋವಾಗಿದ್ದರೂ ಅವನಿಗೆ ಸಂಕಟದ ಸಮಯದಲ್ಲಿ ಮಗಳ ನೆನಪಾಗಿದ್ದು ನೋಡಿ ಕಣ್ಣೊರೆಸಿಕೊಂಡಿದ್ದ. "ಓ! ಪಡಚ್ಚೋನೆ... ಈ ಮನುಷ್ಯರನ್ನೆಲ್ಲ ಸೈತಾನಿಯ ಮುಷ್ಟಿಗೆ ಯಾಕೆ ಕೊಟ್ಟೆ" ಎಂದು ಅಲವತ್ತುಕೊಂಡಿದ್ದ. ತಮ್ಮ ಮುಖ ನೋಡುತ್ತ ಮೈಮರೆತು ನಿಂತಿದ್ದ ಫಕೀರಿಚ್ಚನನ್ನು ಅಲುಗಿಸಿದ ಹುಸೈನ್ಬಾವಾ ತಗ್ಗಿಸಿದ ಧ್ವನಿಯಲ್ಲಿ, "ಫಕೀರಿಚ್ಚ, ನಾವು ಅಪಾಯದಲ್ಲಿದ್ದೇವೆ. ಈಗ ನೀನೇ ಏನಾದರೂ ಮಾಡಬೇಕು"